## ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರ ನ್ಯಾಯಾಲಯ, ಹಾಸನ

### ಸ್ಪೆಷಲ್ ಕೇಸ್ ನಂಃ 57/2020

| | ಚಾಸಾಃ 1 | ಅಸಾಃ 2 |
|---|---|---|
| ಹೆಸರು | ರಂಗಸ್ವಾಮಿ | |
| ತಂದೆಯ ಹೆಸರು : | ಮೂಡಲಗಿರಿಯಯ್ಯ | |
| ವಯಸ್ಸು: | 64 ವರ್ಷ | |
| ಕೆಲಸಃ | ವ್ಯವಸಾಯ | |
| ವಾಸಸ್ಥಳ | ಬಾಗೇಶಪುರ | |

ದಿನಾಂಕಃ 12/02/2026 ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಎಸ್‌ಪಿಪಿ ರವರಿಂದ

ನಾನು ಬಿ.ಎ. ಪಧವೀ ವಿದ್ಯಾಭ್ಯಾಸ ಮಾಡಿರುತ್ತೇನೆ.ನನಗೆ ಕನ್ನಡ ಓದಲು ಬರೆಯಲು ಬರುತ್ತದೆ. ಆರೋಪಿತರು ನನಗೆ ಗೊತ್ತು. 1ನೇ ಆರೋಪಿ ಚನ್ನರಾಯಪಟ್ಟಣ ತಾಲ್ಲೂಕು ಕತ್ತರಿಘಟ್ಟ ಗ್ರಾಮದವರು. 3ನೇ ಆರೋಪಿ ನಮ್ಮ ಗ್ರಾಮದವರು. ಆರೋಪಿತರು ಆಚಾರಿ ಜಾತಿಗೆ ಸೇರಿದವರಿರುತ್ತಾರೆ. 2 ಮತ್ತು 4ನೇ ಅರೋಪಿಯವರು ತೀರಿಕೊಂಡಿರುತ್ತಾರೆ. ಚಾಸಾ-2 ರಿಂದ 5 ರವರು ಗೊತ್ತು. ಚಾಸಾ-3 ಮತ್ತು 5 ರವರು ತೀರಿಕೊಂಡಿರುತ್ತಾರೆ. ಚಾಸಾ-4 ಗೊತ್ತು. ಚಾಸಾ-6 ನನ್ನ ಅಕ್ಕ. ಚಾಸಾ-7 ನನ್ನ ಹೆಂಡತಿ.

ಜಿನಕೆರೆಹಳ್ಳಿ ಗ್ರಾಮದಲ್ಲಿ ಸರ್ವೆ ನಂಬರ್ 40/1 ರಲ್ಲಿ 3 ಎಕರೆ 18 ಗುಂಟೆ ಇರುತ್ತದೆ. ಈ ಸ್ವತ್ತು ನನ್ನ ತಾತ ರಂಗ ಬಿನ್ ಕೆಂಚ ರವರಿಗೆ ಮಂಜೂರಾಗಿರುತ್ತದೆ. ಅವರು ಪೌತಿಯಾಗಿರುತ್ತಾರೆ. ಅವರ ಮೃತನ ನಂತರ ನನ್ನ ಅಜ್ಜಿ ಬಸಮ್ಮನ ಹೆಸರಿಗೆ ಪೌತಿಖಾತೆಯ ಮುಖಾಂತರ ಬಂದಿರುತ್ತದೆ. ಬಸಮ್ಮ ಕೂಡ ತೀರಿಕೊಂಡಿರುತ್ತಾರೆ. ಅವರು ತೀರಿಕೊಂಡು ನಂತರ ನನ್ನ ತಾಯಿಯವರು

ಸ್ವತ್ತಿನ ಅನುಭವದಲ್ಲಿದ್ದರು. ಒಂದು ಎಕರೆ 2 ಗುಂಟೆ ನನ್ನ ಹೆಸರಿಗೆ ಖಾತೆಯಾಗಿರುತ್ತದೆ. ಉಳಿದ 2 ಎಕರೆ 2 ಗುಂಟೆ ಕಾಳಯ್ಯ ಬಿನ್ ಸಣ್ಣ ಈರೇಗೌಡ ಎಂದು ಕೈಬರಹ ಪಹಣಿಯಲ್ಲಿ ತಪ್ಪಾಗಿದ್ದು, ಅದನ್ನು ತಿದ್ದುಪಡಿಗೆ ಅರಸೀಕೆರೆಯ ತಾಲ್ಲೂಕು ಕಚೇರಿಗೆ ಅರ್ಜಿ ಕೊಟ್ಟಿದ್ದೆ. ಕೈ ಬರವಣಿಗೆಯಲ್ಲಿ ರೆವಿನ್ಯೂ ಸೆಕ್ರೆಟರಿ ತಪ್ಪಾಗಿ ಬರೆದಿದ್ದರು. ಅದು ಸರಿಯಾಗುವಷ್ಟರಲ್ಲಿ 2ನೇ ಆರೋಪಿಯವರು ನಾನೇ ಕಾಳಯ್ಯ ಎಂದು 1ನೇ ಆರೋಪಿಗೆ ಮಾರಾಟ ಮಾಡಿರುತ್ತಾರೆ. ಕ್ರಯಪತ್ರವನ್ನು ಸಬ್ ರಿಜಿಸ್ಟ್ರರ್ ನಲ್ಲಿ ನೊಂದಾವಣಿ ಮಾಡಿರುತ್ತಾರೆ. ಪ್ರತಿ ವರ್ಷ ಆರ್ ಟಿ ಸಿಯನ್ನು ಪಡೆಯುತ್ತೇನೆ. ಮಾರ್ಚ 2011 ರಲ್ಲಿ ನನಗೆ ವಿಷಯ ತಿಳಿಯಿತು. ನಂತರ ನಾನು ಈ ವಿಚಾರವಾಗಿ ದೂರು ಕೊಟ್ಟಿರುತ್ತೇನೆ.

3 ಮತ್ತು 4ನೇ ಅರೋಪಿತರು ನಮ್ಮ ಊರಿನವರಾಗಿದ್ದರೂ ಸಹಾ ಜಿನಕೆರೆಹಳ್ಳಿ ಎಂದು ಹೇಳಿ ಸಾಕ್ಷಿದಾರರಾಗಿ ಕ್ರಯ ಪತ್ರಕ್ಕೆ ಸಹಿ ಮಾಡಿರುತ್ತಾರೆ. 2ನೇ ಆರೋಪಿಯವರ ಜನಾಂಗಕ್ಕೆ 3 ಮತ್ತು 4ನೇ ಆರೋಪಿಯವರು ಸೇರಿದ್ದರಿಂದ ಅವರಿಗೆ ಸಹಾಯ ಮಾಡಲು ಸಹಿ ಮಾಡಿರುತ್ತಾರೆ. 1 ಮತ್ತು 2ನೇ ಆರೋಪಿತರು ನಾನು ಪರಿಶಿಷ್ಟ ಜಾತಿಗೆ ಸೇರಿದವರು ಎಂದು ತಿಳಿದಿದ್ದರೂ ಸಹಾ ನನಗೆ ಮೋಸ ಮಾಡುವ ಉದ್ದೇಶದಿಂದ ಈ ಕೃತ್ಯ ಮಾಡಿರುತ್ತಾರೆ.

ನಾನು ಕ್ರಯಪತ್ರವನುನ ತೆಗೆದು ನೋಡಿಸಿದಾಗ, ಕ್ರಯ ಪತ್ರದಲ್ಲಿ 2ನೇ ಆರೋಪಿಯ ಪೋಟೋ ಇತ್ತು, 2ನೇ ಆರೋಪಿಯ ಪಕ್ಕದ ಊರಿನ ಶಿವನಂಜೇಗೌರು ಅವರು ಮೋಸ ಮಾಡುವ ಉದ್ದೇಶದಿಂದ ಕ್ರಯ ಪತ್ರದಲ್ಲಿ ಕಾಳಯ್ಯ ಎಂದು ಹೇಳಿರುತ್ತಾರೆ. ಸಾಕ್ಷಿದಾರರ ಸಹಿಯನ್ನು ಪತ್ರದಲ್ಲಿ ನೋಡಿ ಗುರುತಿಸಿರುತ್ತಾರೆ. 4 ಮತ್ತು 3ನೇ ಆರೋಪಿತರು ತಂದೆ ಮಗ ಆಗಿರುತ್ತಾರೆ. ಅವರು ನಮ್ಮ ಊರಿನವರಾಗಿರುತ್ತಾರೆ. ಅವರು ಕ್ರಯಪತ್ರದಲ್ಲಿ ಜಿಂಕೇನಹಳ್ಳಿ ಎಂದು ಸಹಿ ಮಾಡಿರುತ್ತಾರೆ. ಜಿಂಕೇಶನಹಳ್ಳಿಯಲ್ಲಿ ಯಾರು ಆಚಾರಿ

ಜನಾಂಗದವರು ಇರುವುದಿಲ್ಲ. ಹಾಗಾಗಿ ನಾನು ಇವರೇ ಎಂದು ಗುರುತಿಸಿ ಪೊಲೀಸರಿಗೆ ತಿಳಿಸಿರುತ್ತೇನೆ.

ದಿ. 21.01.2010 ರಂದು ಕ್ರಯಪತ್ರವಾಗಿರುತ್ತದೆ. 3 ಎಕರೆ 18 ಗುಂಟೆಗೆ ನಮ್ಮ ತಾತನ ಕಾಲದಿಂದಲೂ ಇಲ್ಲಿಯವರೆಗೂ ನಾವೇ ಸ್ವಾಧೀನದಲ್ಲಿದ್ದೇನೆ. ಅದರಲ್ಲಿ ರಾಗಿ, ಆಲೂಗಡ್ಡೆ ಮತ್ತು ಮೆಕ್ಕೆ ಜೋಳ ಬೆಳೆಸುತ್ತೇವೆ. ಈ ಬಗ್ಗೆ ದೂರನ್ನು ನೀಡಿರುತ್ತೇನೆ.

(ಈ ಹಂತದಲ್ಲಿ ಅಸಲು ದೂರು ಇಲ್ಲದ ಕಾರಣ, ಮಾನ್ಯ ಸ.ಅ ರವರು ಕಾಲವಕಾಶ ಕೋರಿರುತ್ತಾರೆ.)

(ನನ್ನ ಉಕ್ತಲೇಖನಕಲ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಪ್ರ.,

ಅಪರ ಸೆಷನ್ಸ್ ಮತ್ತು ವಿಶೇಷ
ನ್ಯಾಯಾಧೀಶರು, ಹಾಸನ